

ನೀನು ಜೀವನದಾದ್ಯಂತ ಮಾಡಿದ ಸಂಕಲ್ಪವನ್ನು ನೆನೆ, ನೆರವೇರಿಸಿದ ಕರ್ತವ್ಯಗಳನ್ನು ನೆನೆ" ಎಂದು ಹದಿನೇಳನೆಯ ಮಂತ್ರವು ಹೇಳುತ್ತದೆ. ಆ ಮೂಲಕ ಪರತತ್ತ್ವದ ಸಂಕಲ್ಪದೊಡನೆ ವಿಶ್ವವಿಕಾಸ ಕ್ರಿಯೆಯಲ್ಲಿ ಒಂದಾದ ಜೀವಿಯು, "ಆ ಸತ್ಯಸಂಕಲ್ಪವನ್ನು ನಾನು ನೆರವೇರಿಸಿದೆನೆ? ಎಷ್ಟು ಭಾಗ ನೆರವೇರಿಸಿದೆ? ನನ್ನ ಗುರಿ ಏನು?" ಎಂಬುದನ್ನು ಸತತವಾಗಿ ಪರಿಶೀಲನೆ ಮಾಡಿಕೊಳ್ಳಬೇಕೆಂದು ನಿರ್ದೇಶಿಸುತ್ತದೆ.

ಹೀಗೆ **ಪರತತ್ತ್ವ ಅನುಗ್ರಹ, ಪುರುಷ ಪ್ರಯತ್ನ** – ಈ ಎರಡರ ಅಗತ್ಯವನ್ನೂ ನಿಚ್ಚಳವಾಗಿ ಸಿದ್ಧಪಡಿಸಿ ತೋರಿಸಿದ ಉಪನಿಷತ್ತು, ಅರ್ಚಿರಾದಿ ಮಾರ್ಗದಲ್ಲಿ ಸಾಗಿ ಮತ್ತೆ ಹಿಂತಿರುಗಿ ಬರದಂತಹ ಮೂಲ 'ನೆಲೆ'ಗೆ ತನ್ನನ್ನು ಕರೆದೊಯ್ಯಬೇಕೆಂದು ಭಗವಂತನನ್ನು ಪ್ರಾರ್ಥಿಸಿಕೊಳ್ಳುವುದರೊಂದಿಗೆ ಮುಕ್ತಾಯವಾಗುತ್ತದೆ.

"ಅನೇಕ ಪ್ರಪಂಚಗಳೂ ಇಲ್ಲ, ಅನೇಕ ಜೀವಗಳೂ ಇಲ್ಲ. ಈ ಎಲ್ಲವೂ ಆ ಏಕದ ಅಭಿವ್ಯಕ್ತಿಯೇ, ಆ ಏಕವೇ ಅನೇಕದಂತೆ – ವಸ್ತು, ಆತ್ಮ, ಆಲೋಚನೆ, ಮನಸ್ಸು ಮೊದಲಾದವಂತೆ ಕಾಣಿಸುತ್ತದೆ. ಅನೇಕದಂತೆ ತೋರುತ್ತಿರುವುದು ಅದೊಂದೇ. ನೀನು ಶುದ್ಧಾತ್ಮನು, ಹೇ ಸರ್ವಶಕ್ತನೇ! ಜಾಗೃತನಾಗು, ನಿದ್ರೆ ನಿನಗೆ ತರವಲ್ಲ; ನಿನ್ನ ಸ್ವಭಾವವನ್ನು ಪ್ರಕಟಪಡಿಸು" ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಈ ತತ್ತ್ವವನ್ನು ತಿಳಿದು ಅನುಭವಿಸಿ ಎಲ್ಲರನ್ನೂ ಎಚ್ಚರಗೊಳಿಸಬೇಕು. ಈ ಜ್ಞಾನದ ಆಸರೆಯೊಡನೆ ಮಾಡಬೇಕಾದ, ಪಾಲಿಗೆ ಬಂದ ಎಲ್ಲಾ ಕೆಲಸಗಳನ್ನೂ ನಿರ್ವಹಿಸಬೇಕು, ಆಲಸಿಯಾಗಿ ಕುಳಿತುಕೊಳ್ಳಬಾರದು; ಶ್ರದ್ಧೆ, ಭಕ್ತಿ, ನಿಷ್ಠೆ, ಪ್ರೀತಿಗಳಿಂದ ಕರ್ತವ್ಯಗಳನ್ನು ನಿರ್ವಹಿಸುತ್ತಲೇ ಆಯುಸ್ಸನ್ನು ಪೂರ್ಣಗೊಳಿಸಬೇಕು. ಹಾಗೆಯೇ ನಾವು ಆತ್ಮನನ್ನು ನಿತ್ಯಶುದ್ಧ, ನಿತ್ಯಬುದ್ಧ, ನಿತ್ಯಮುಕ್ತ ಎಂದು ತಿಳಿಯಬೇಕು. ಈ ಅರಿವು ಬಂದ ತಕ್ಷಣವೇ ಅದು ನಮ್ಮನ್ನು ಇಂದ್ರಿಯಜೀವನದ ಅಲ್ಪತನದಿಂದ ಮೇಲೆತ್ತಿ ವಿಶ್ವದರ್ಶನ, ಪ್ರೀತಿ ಸಹಾನುಭೂತಿಗಳನ್ನು ನೀಡುತ್ತದೆ. ನರಗಳ ಕಾಯಿಲೆ, ಮಾನಸಿಕ ಉದ್ವೇಗಗಳಿಂದ ಉಂಟಾಗುವ ನೋವು ದುಃಖಗಳಿಂದಲೂ ಸಹ ನಮ್ಮನ್ನು ಪಾರುಮಾಡುತ್ತದೆ. ಇದೇ ಈ ಆಧುನಿಕ ಯುಗಕ್ಕೆ ಈಶಾವಾಸ್ಯ ಉಪನಿಷತ್ತಿನಿಂದ ದೊರಕುವ ಮಹಾನ್ ಕೊಡುಗೆ.

ಅಷ್ಟೇ ಅಲ್ಲದೆ, ವ್ಯಕ್ತಿಯು ತನ್ನ ಜೀವಿತಾವಧಿಯಲ್ಲಿ ಸಾಧಿಸಬೇಕಾದ ಪ್ರವೃತ್ತಿ ನಿವೃತ್ತಿ ಧರ್ಮಗಳನ್ನು ಹೇಗೆ ಅನುಷ್ಠಾನ ಮಾಡಬೇಕು, ಹೇಗೆ ಬದುಕಿದರೆ ಬದುಕು ಹಗುರವಾಗಿ ಎಂದೆಂದೂ ಅಳಿಯದ ನಿತ್ಯ ನಿರಂಜನ ನಿರ್ಮಲ ಜ್ಯೋತಿ ಅರಿವಿಗೆ ಬರುವುದು ಎಂಬುದನ್ನು ತಿಳಿಸಿ ಉಪಕರಿಸುತ್ತಿದೆ ಈ ಮಹಾನ್ ಈಶಾವಾಸ್ಯ ಉಪನಿಷತ್ತು.

## ಬದುಕಿಗೊಂದು ಬೆಳಕು

### ಲೋಭವೇ ಪಾಪಕ್ಕೆ ಮೂಲ

ಪೇಶಾವರದಲ್ಲಿ ಒಬ್ಬ ಶ್ರೀಮಂತನಿದ್ದನು. ಅವನಿಗೆ ಮಸಂದ ಎಂಬ ಗೊಲ್ಲನು ಪರಿಚಿತನಾಗಿದ್ದನು. ಮಸಂದನಿಗೆ ಆ ಶ್ರೀಮಂತನು ಒಂದು ನೂರು ಚಿನ್ನದ ನಾಣ್ಯಗಳನ್ನೂ ಹರಳುಗಳ ಕೆತ್ತನೆಯಿರುವ ಸುಂದರವಾದ ಒಂದು ಜೊತೆ ಕೈಬಳೆಗಳನ್ನೂ ಹಾಗೂ ಬೆಲೆಬಾಳುವ ಉಡುಗೆಗಳು ಮತ್ತು ಶಸ್ತ್ರಗಳನ್ನೂ ಕೊಟ್ಟು, ಇವುಗಳನ್ನು ಗುರು ಗೋವಿಂದಸಿಂಹರಿಗೆ ತಲುಪಿಸು ಎಂದು ಹೇಳಿದನು. ಅಮೂಲ್ಯವಾದ ಆ ಬಳೆಗಳನ್ನೂ, ನಾಣ್ಯಗಳನ್ನೂ ಕಂಡು ಮಸಂದನ ಬಾಯಿಯಲ್ಲಿ ನೀರೂರಿತು. ಇವೆರಡನ್ನೂ ಅವನು ತನ್ನ ಪೇಟದೊಳಗೆ ಬಚ್ಚಿಟ್ಟುಕೊಂಡನು. ಗುರು ಗೋವಿಂದ ಸಿಂಹರ ಬಳಿಗೆ ಹೋಗಿ ಧನಿಕ ಕೊಟ್ಟಿದ್ದ ಉಳಿದ ವಸ್ತುಗಳನ್ನು ಮಾತ್ರ ಕೊಟ್ಟು ಕೈಮುಗಿದನು. ಆಗ ಗುರು ಗೋವಿಂದಸಿಂಹರು ಇನ್ನೂ ಬಾಲಕರಾಗಿದ್ದರು. ಆದರೂ ಮಸಂದನ ಕಪಟತನದ ಸುಳಿವು ಅವರಿಗೆ ಗೊತ್ತಾಯಿತು. "ಅಯ್ಯಾ, ನಿನ್ನ ಬಳಿ ಇನ್ನೂ ಏನಾದರೂ ವಸ್ತುಗಳು ಉಳಿದಿವೆಯೇ?" ಎಂದು ಕೇಳಿದರು. ಇದನ್ನು ಕೇಳಿ ಮಸಂದನಿಗೆ ತುಂಬ ಕೋಪ ಬಂತು. ಅವನು ಹೀಗೆ ಹೇಳಿದ: "ನಿಮ್ಮ ಮಾತಿನ ಅರ್ಥ ನಾನು ಕಳ್ಳನೆಂದೇ ? ನಾನು ಎಲ್ಲ ವಸ್ತುಗಳನ್ನೂ ಕೊಟ್ಟಿಲ್ಲವೆನ್ನುತ್ತೀರಾ? ಅದಕ್ಕೇ ಹಿರಿಯರು ಹೇಳುವುದು, ಚಿಕ್ಕ ಪುಟ್ಟ ಹುಡುಗರನ್ನು ರಾಜರನ್ನಾಗಿ ಮಾಡಬಾರದು ಎಂದು. ನಿಮ್ಮ ವಯಸ್ಸು ಸ್ವಲ್ಪ ಪ್ರಬುದ್ಧವಾಗಿದ್ದರೆ ಹೀಗೆಲ್ಲಾ ನನಗೆ ಅವಮಾನ ಮಾಡುತ್ತಿರಲಿಲ್ಲ."

ಅದಕ್ಕೆ ಗುರು ಗೋವಿಂದಸಿಂಹರು ನಗುನಗುತ್ತಾ ಹೇಳಿದರು, "ದುರಾಸೆಯನ್ನು ಸ್ವಲ್ಪವಾದರೂ ಹಿಡಿತದಲ್ಲಿ ಇಟ್ಟುಕೊಳ್ಳದವನಿಗಿಂತ ದೊಡ್ಡ ಪಾಪಿ ಬೇರೊಬ್ಬನಿಲ್ಲ. ಲೋಭಿಯು ತನ್ನ ಆಸೆಯನ್ನು ಪೂರೈಸಿಕೊಳ್ಳಲು ಎಂಥ ಪಾಪಕಾರ್ಯವನ್ನು ಮಾಡಲೂ ಹಿಂಜರಿಯುವುದಿಲ್ಲ. ನಿಮ್ಮಿಂದ ಆದದ್ದೂ ಇದೇ. ನೀವು ಬರಿ ಕಳ್ಳರು ಮಾತ್ರ ಅಲ್ಲ, ಬಹಳ ಖದೀಮರೂ ಆಗಿದ್ದೀರಿ." ಹೀಗೆ ಹೇಳಿ ಒಂದು ಬೆತ್ತದಿಂದ ಮಸಂದನ ಪೇಟವನ್ನು ಮೇಲಕ್ಕೆ ಹಾರಿಸಿದರು. ಅದರ ಒಳಗಿಂದ ಬಳೆಗಳೂ ನಾಣ್ಯಗಳೂ ಕೆಳಗೆ ಉದುರಿದವು. ಮಸಂದ ತಲೆತಗ್ಗಿಸಿ ನಾಚಿ ಅಡ್ಡಬಿದ್ದು ಕ್ಷಮೆ ಕೇಳಿದ. ಅದಕ್ಕೇ ಹೇಳುವುದು, **"ಪಾಪಕಾರ್ಯದ ಮೂಲ ದುರಾಸೆ"** ಎಂದು.


(ಹಿಂದಿ ಮೂಲ: *ಶರತ್‌ಚಂದ್ರ ಪೆಂಡಾರಕರ್*, ಅನುವಾದ: *ಸಿ.ಎಸ್. ಮಂಗಳಮ್ಮ*)

# ಶಿಕ್ಷಣದ ಬಗ್ಗೆ ಕೆಲವು ಚಿಂತನೆಗಳು

ಸ್ವಾಮಿ ರಾಘವೇಶಾನಂದ

**ಮುಂದಿನ ಜನಾಂಗವನ್ನು ಸಮರ್ಥವಾಗಿ ರೂಪಿಸುವ ಜವಾಬ್ದಾರಿ ಶಿಕ್ಷಕರ ಮೇಲಿದೆ. ಶಿಕ್ಷಣ ವ್ಯವಸ್ಥೆಯ ಕೇಂದ್ರಬಿಂದು ಶಿಕ್ಷಕರೇ. ಉತ್ತಮ ಶಿಕ್ಷಕರಾಗುವುದು ಹೇಗೆ ಎಂಬ ವಿಚಾರದಲ್ಲಿ ಬಹಳ ವಿವೇಕಪೂರ್ಣ ಮಾರ್ಗದರ್ಶನವನ್ನು ಈ ಲೇಖನದಲ್ಲಿ ಕಾಣುತ್ತೇವೆ. ಇಂದಿನ ಸಾಮಾಜಿಕ ಹಿನ್ನೆಲೆಯಲ್ಲಿ ಶಿಕ್ಷಕರು ವಹಿಸಬೇಕಾದ ಗಣನೀಯ ಪಾತ್ರದ ಬಗ್ಗೆ ಬೆಳಕು ಚೆಲ್ಲಿರುವ ಪೂಜ್ಯ ಸ್ವಾಮೀಜಿಯವರು ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮದ ಮುಖ್ಯಸ್ಥರು. ಪ್ರಖ್ಯಾತ ವಾಗ್ಮಿಗಳು, ಸಂಘಟನಾಚತುರರೂ ಆಗಿರುವ ಸ್ವಾಮೀಜಿಯವರು ಬರೆದಿರುವ ಹಲವು ಗ್ರಂಥಗಳು ನಾಡಿನಾದ್ಯಂತ ಪ್ರಸಿದ್ಧಿ ಪಡೆದಿವೆ.**

ಈ ವಿಜ್ಞಾನ ಯುಗದಲ್ಲಿ, ಯಾವುದೇ ದೇಶದ ಪ್ರಗತಿಯು ವಿದ್ಯಾಭ್ಯಾಸದ ಮೇಲೆ ನಿಂತಿದೆ. ಆದ್ದರಿಂದಲೇ ವಿದ್ಯಾಭ್ಯಾಸ ಮಾಡಿಸುವ ಶಿಕ್ಷಕರ ವೃತ್ತಿಯು ಅತ್ಯಂತ ಶ್ರೇಷ್ಠ ವೃತ್ತಿ ಎಂದು ಅನಾದಿ ಕಾಲದಿಂದಲೂ ಗುರುತಿಸಲ್ಪಟ್ಟಿದೆ. ಆದುದರಿಂದಲೇ ಗುರುವಿಗೆ ಭಗವಂತನ ಸಮಾನವಾದ ಸ್ಥಾನವನ್ನು ಕೊಡಲಾಗಿದೆ. ಹಾಗೂ ಗುರುವನ್ನೇ ಬ್ರಹ್ಮ-ವಿಷ್ಣು-ಮಹೇಶ್ವರ ಎಂದು ಭಾವಿಸಲಾಗಿದೆ.




ಶಿಕ್ಷಣಕ್ಕೆ ಸಂಬಂಧಿಸಿದಂತೆ ಇಂದು ಹಲವಾರು ಸಂಶೋಧನೆಗಳು, ಪರಿಷ್ಕಾರಗಳು ನಡೆಯುತ್ತಿರುವುದು ತುಂಬ ಸಂತಸದ ಸಂಗತಿ. ವಿಶ್ವ ಆರೋಗ್ಯ ಸಂಸ್ಥೆಯು ಸೂಚಿಸಿರುವ, 'ಜೀವನ ಕೌಶಲ'ಗಳನ್ನು ಮತ್ತು 'ಜೀವನ ವಿಜ್ಞಾನ'ದ ತತ್ತ್ವಗಳನ್ನು ವಿದ್ಯಾರ್ಥಿಗಳಿಗೆ ಮನಗಾಣಿಸಬೇಕೆಂಬ ಯೋಜನೆ ತುಂಬಾ ಶ್ಲಾಘನೀಯವಾದುದು. ಇಂದಿನ ಎಳೆಯರೇ ನಾಳೆಯ ರಾಷ್ಟ್ರದ ಆಧಾರಸ್ತಂಭಗಳು. ಆದ್ದರಿಂದ ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ಶ್ರೇಷ್ಠ ಮಟ್ಟದಲ್ಲಿ ಅರಳಿಸುವತ್ತ ಎಷ್ಟು ಗಮನ ಕೊಟ್ಟರೂ ಕಡಿಮೆಯೇ. ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ನಿರ್ಮಾಣ ಮಾಡುವಲ್ಲಿ ಪ್ರಧಾನ ಪಾತ್ರವಹಿಸುವವರು ಮೂವರು – **ತಾಯಿ, ತಂದೆ ಹಾಗೂ ಅಧ್ಯಾಪಕರು.** ಇವರಲ್ಲಿ ಯಾರೊಬ್ಬರು ಎಚ್ಚರಗೇಡಿಗಳಾಗಿ ವರ್ತಿಸಿದರೂ ಉಳಿದ ಇಬ್ಬರ ಪ್ರಯತ್ನವೆಲ್ಲ ಬೂದಿಯಲ್ಲಿ ಮಾಡಿದ ಹೋಮವಾದೀತು. ಸ್ವಲ್ಪ ಮಟ್ಟಿಗಾದರೂ ತಮ್ಮ ಸ್ವಾರ್ಥವನ್ನು ಬದಿಗೊತ್ತಿ, ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಲು ಈ ಮೂವರೂ ಟೊಂಕಕಟ್ಟಿ ನಿಲ್ಲಬೇಕು. ಕೆಲವು ವರ್ಷಗಳ ಕಾಲ ಅವರು ತಮ್ಮ ಸಮಯ ಶಕ್ತಿಗಳನ್ನು ಈ ಪವಿತ್ರ ಕಾರ್ಯಕ್ಕೆ – ಕಿರಿಯರ ಚಾರಿತ್ರ್ಯ ನಿರ್ಮಾಣ ಕಾರ್ಯಕ್ಕೆ – ಮೀಸಲಾಗಿಟ್ಟರೆ, ಸಮಾಜದಲ್ಲಿ ಅಪೂರ್ವ ಪರಿವರ್ತನೆಯಾದೀತು. ತ್ಯಾಗವಿಲ್ಲದೆ ಏನನ್ನಾದರೂ ಸಾಧಿಸಲು ಸಾಧ್ಯವೇ?

ವ್ಯಕ್ತಿತ್ವವು ಪರಿಪೂರ್ಣವೆನಿಸಬೇಕಾದರೆ ಈ ಮೂರು ಅಂಶಗಳ ಕಡೆಗೆ ಗಮನ ಕೊಡಬೇಕು.

**೧) ಶಾರೀರಿಕ ಶಕ್ತಿ**

**೨) ಬೌದ್ಧಿಕ ಶಕ್ತಿ** ಹಾಗೂ

**೩) ಆಧ್ಯಾತ್ಮಿಕ ಶಕ್ತಿ**

ಇವುಗಳನ್ನೇ 'ಬಾಹುಬಲ', 'ಬುದ್ಧಿಬಲ' ಮತ್ತು 'ಆತ್ಮಬಲ' ಎಂದು ಹೇಳುತ್ತಾರೆ. ಈ ಮೂರು ಶಕ್ತಿಗಳನ್ನು ವಿಕಸನಗೊಳಿಸಿ, ಪರಿಪೂರ್ಣ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಸ್ವಾಮಿ ವಿವೇಕಾನಂದರ ಶಕ್ತಿಪೂರ್ಣ ನುಡಿಗಳೂ, ಪ್ರಬುದ್ಧ ಚಿಂತನೆಗಳೂ ತುಂಬ ಸಹಕಾರಿ ಮತ್ತು ಪರಿಣಾಮಕಾರಿ.

ಅಧ್ಯಾಪಕರ, ಆಚಾರ್ಯರ, ಶಿಕ್ಷಕರ ಕಾರ್ಯ ಸುಲಭದ ಕೆಲಸವಲ್ಲ. ಅವರ ಹೊಣೆ ಗುರುತರವಾದದ್ದು. ಏಕೆಂದರೆ ಅದು ಎರಡು ಚೇತನಗಳ ನಡುವೆ ನಡೆಯುವ ಜ್ಞಾನ ವಿನಿಮಯ. ಈ ಜ್ಞಾನವಿನಿಮಯ ಯಶಸ್ವಿಯಾಗಿ ನಡೆಯಬೇಕಾದರೆ, ಅಧ್ಯಾಪಕರಲ್ಲಿ ವಿದ್ಯೆ, ಶಿಕ್ಷಣ, ಪ್ರತಿಭೆಗಳಷ್ಟೇ ಇದ್ದರೆ ಸಾಲದು, ಹಿನ್ನೆಲೆಯಲ್ಲಿ ಘನವಾದ ವ್ಯಕ್ತಿತ್ವವೂ ಇರಬೇಕು. ಏಕೆಂದರೆ, ಶಿಕ್ಷಣ ಎಂದರೆ ಮಸ್ತಕದಿಂದ ಮಸ್ತಕಕ್ಕೆ ಮಾಹಿತಿಗಳ ರವಾನೆ ಅಲ್ಲವಲ್ಲ! ವ್ಯಕ್ತಿತ್ವವನ್ನು ಅರಳಿಸಬಲ್ಲ, ಜೀವನವನ್ನು ಬೆಳಗಿಸಬಲ್ಲ ಅರಿವು – ಮೌಲ್ಯಗಳ ಸ್ಫುರಣವೇ ನೈಜಶಿಕ್ಷಣ. ಈ ಬಗೆಯ ಶಿಕ್ಷಣ ಸಾಧ್ಯವಾಗುವುದು ಶಿಕ್ಷಕರು ಗಿಟ್ಟಿಸಿಕೊಂಡ ಡಿಗ್ರಿಗಳ ಮೂಲಕ ಅಲ್ಲ, ಅವರು ಹೋರಾಡಿ ಬೆಳೆಸಿಕೊಂಡ ಉದಾತ್ತ ವ್ಯಕ್ತಿತ್ವದ ಬಲದಿಂದ! ಅಧ್ಯಾಪಕರ ವಿದ್ಯಾಸಂಪತ್ತು, ವಾಕ್‌ಪ್ರತಿಭೆ ಇವೂ ಕೂಡ ವಿದ್ಯಾರ್ಥಿಗಳನ್ನು ಬೆರಗಾಗಿಸಬಲ್ಲವು, ನಿಜ. ಆದರೆ ಕೇವಲ ಅಷ್ಟರಿಂದಲೇ ಶ್ರೇಷ್ಠಮಟ್ಟದ ಪ್ರಜೆಗಳು ಹೊರಹೊಮ್ಮಬಲ್ಲರೇ ಎಂಬುದು ಆಲೋಚನೀಯ. ವರ್ಷೇ ವರ್ಷೇ ವಿಶ್ವವಿದ್ಯಾನಿಲಯಗಳಿಂದ ಹೊರಬರುವ ಸ್ನಾತಕರನ್ನೂ, ಸ್ನಾತಕೋತ್ತರ ಪದವೀಧರರನ್ನು ಪರೀಕ್ಷಿಸಿದಾಗ, ಅವರಿಂದ ರಾಷ್ಟ್ರಕ್ಕೆ ಸೇವೆ ಸಲ್ಲುವ ಮಾತು ಒತ್ತಟ್ಟಿಗಿರಲಿ, ರಾಷ್ಟ್ರವೇ ಅವರಿಗೆ ಸೇವೆ ಸಲ್ಲಿಸುವಂತಾಗಿದೆ – ನಿರುದ್ಯೋಗ ನಿವಾರಣೆ ಮುಂತಾದ ಯೋಜನೆಗಳ ಮೂಲಕ! ಇಂತಹ ಸತ್ವಹೀನ ಯುವ ಜನತೆಯು ಸ್ವಾಮಿ ವಿವೇಕಾನಂದರ ವಾಕ್‌ಚಾಟಿಗೆ ತಮ್ಮನ್ನು ತಾವು ಸ್ವಲ್ಪ

ಒಡ್ಡಿಗೊಂಡರೆ ಅವರೊಳಗೆ ನವಶಕ್ತಿ ಸಂಚಾರವಾದೀತು!

ಈ ವಿಷಯ ಒತ್ತಟ್ಟಿಗಿರಲಿ, ಈಗ ಪ್ರಶ್ನೆ ಏನೆಂದರೆ – ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ಸರ್ವತೋಮುಖವಾಗಿ, ಪರಿಪೂರ್ಣವಾಗಿ ಅರಳಿಸುವುದು ಹೇಗೆ ಎಂಬುದು. ಈ ನಿಟ್ಟಿನಲ್ಲಿ ಶಿಕ್ಷಣ ಇಲಾಖೆಯು ಸಾಕಷ್ಟು ಚಿಂತನೆ ನಡೆಸಿದೆ. ಆದರೆ ಆ ಯೋಜನೆಗಳನ್ನು ಕಾರ್ಯಗತಗೊಳಿಸಲು ಕೈಗೊಂಡ ಕ್ರಮ ಸಮರ್ಪಕವಾಗಿದೆಯೇ ಎಂಬುದು ಮಾತ್ರ ಪ್ರಶ್ನಾರ್ಹವಾಗಿದೆ. ಯೋಜನೆ ಎಷ್ಟೇ ಅದ್ಭುತವಾಗಿದ್ದರೂ ಅದನ್ನು ಕೃತಿಗಿಳಿಸುವ ಮಾಧ್ಯಮ ಸಮರ್ಥವಾಗಿಲ್ಲದಿದ್ದರೆ ಅಲ್ಲಿ ಗಮನಾರ್ಹ ಫಲಿತಾಂಶ ದೊರೆಯಲಾರದು. ಇಲ್ಲಿ ಕೃತಿಗಿಳಿಸುವ ಮಾಧ್ಯಮ ಎಂದರೆ ಯಾವುದು? ಶಿಕ್ಷಕರ, ಅಧ್ಯಾಪಕರ ವ್ಯಕ್ತಿತ್ವವೇ ಆ ಮಾಧ್ಯಮ!

ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ಬೆಳೆಸಬೇಕಾದರೆ ಮೊದಲು ಶಿಕ್ಷಕರು ತಮ್ಮ ವ್ಯಕ್ತಿತ್ವವನ್ನು ಸದ್ಗುಣಸಂಪನ್ನಗೊಳಿಸಿಕೊಳ್ಳಬೇಕು. **'ಸ್ವಯಂ ಆಚರತೇ ಯಸ್ಮಾತ್ ತಸ್ಮದಾಚಾರ್ಯ ಉಚ್ಯತೇ'**– ತಾನು ಬೋಧಿಸುವುದನ್ನು ಸ್ವತಃ ಆಚರಿಸುವುದರಿಂದ ಆಚಾರ್ಯ ನೆನಿಸುತ್ತಾನೆ" ಎನ್ನುತ್ತವೆ ಶಾಸ್ತ್ರಗಳು. ಆದ್ದರಿಂದ ಗುಣಸೌಷ್ಠವ ವುಳ್ಳವನು ಮಾತ್ರವೇ ಸಮರ್ಥ ಶಿಕ್ಷಕನಾಗಬಲ್ಲ ಮತ್ತು ಅಂತಹ ಸಮರ್ಥ ಶಿಕ್ಷಕ ಮಾತ್ರವೇ ರಾಷ್ಟ್ರರಕ್ಷಕನಾಗಬಲ್ಲ. ಹಾಗಾದರೆ ಬಿ.ಎಡ್, ಎಂ.ಎಡ್. ತರಬೇತಿ ಪಡೆದು ಶಿಕ್ಷಣ ಕಲೆಯನ್ನು ಕರಗತ ಮಾಡಿಕೊಂಡವರು ಸಮರ್ಥ ಶಿಕ್ಷಕರಲ್ಲವೇ ಎಂದರೆ, ಅವರೂ ಕೂಡ ಒಂದರ್ಥದಲ್ಲಿ ಸಮರ್ಥ ಶಿಕ್ಷಕರೇ. ಆದರೆ ವಿದ್ಯಾರ್ಥಿಗಳನ್ನು ಜವಾಬ್ದಾರಿಯುತ, ಸುಸಂಸ್ಕೃತ ಪ್ರಜೆಗಳನ್ನಾಗಿ ಅರಳಿಸಬಲ್ಲ ಪ್ರಬುದ್ಧತೆ, ಸಾಮರ್ಥ್ಯ ಅವರಲ್ಲಿ ಇದೆಯೇ ಎಂಬುದೀಗ ಪ್ರಶ್ನೆ!

ಈಗೇಕೆ ಈ ಪ್ರಶ್ನೆ ಎಂದರೆ ಬರೀ ಪಠ್ಯವಿಷಯಗಳನ್ನು ಕಲಿಯಲು ಅಧ್ಯಾಪಕರೇನೂ ಬೇಕಾಗಿಲ್ಲ, ಉತ್ತಮ ಪುಸ್ತಕಗಳು ಇವೆಯಲ್ಲ ಅಥವಾ ಆ ಕುರಿತಾದ ಧ್ವನಿಸುರುಳಿ ಸಾಕಲ್ಲ! **ವಿದ್ಯಾರ್ಥಿಗಳು ಅಧ್ಯಾಪಕರ ಸಾಕ್ಷಾತ್ ಸನ್ನಿಧಿಗೆ ಧಾವಿಸಿ ಬರುವುದು ಏಕೆಂದರೆ ಪುಸ್ತಕದಿಂದ ಕಲಿಯಲಾಗದ್ದನ್ನು ಅವರ ವ್ಯಕ್ತಿತ್ವದಿಂದ ಕಲಿಯುವುದಕ್ಕಾಗಿ.** ಆದರೆ ಇಂದು ಹೆಸರಾಂತ ವಿದ್ಯಾಸಂಸ್ಥೆಗಳಲ್ಲಿ ಅತ್ಯುತ್ತಮ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಕೂಡ ಆತ್ಮಹತ್ಯೆ, ಅತ್ಯಾಚಾರಗಳಿಗೆ ಹೇಸದಿರುವುದನ್ನು ಕಂಡಾಗ ಅದು ಏನನ್ನು ಎತ್ತಿ ತೋರುತ್ತದೆ? ಅಲ್ಲಿನ ವಿಖ್ಯಾತ ಶಿಕ್ಷಕರು ವಿದ್ಯಾರ್ಥಿಗಳ ನಡೆನುಡಿಯನ್ನು ತಿದ್ದುವಲ್ಲಿ, ವ್ಯಕ್ತಿತ್ವವನ್ನು ಅರಳಿಸುವಲ್ಲಿ ವಿಫಲರಾಗಿದ್ದಾರೆ ಎಂದೇ ಅರ್ಥವಲ್ಲವೇ? ಅಲ್ಲದೆ ಅವರಿಗೆ ಅಲ್ಲಿ ಯಾವುದೇ ಮೌಲ್ಯ ಶಿಕ್ಷಣವೂ ದೊರೆಯುತ್ತಿಲ್ಲ ಎಂಬುದು ತಿಳಿದುಬರುತ್ತದೆ.

ಇನ್ನು ಅಧ್ಯಾಪಕರ ವಲಯದಲ್ಲೂ ದುರ್ವ್ಯಸನಗಳು ನುಸುಳಿಕೊಂಡಿರುವುದನ್ನು ಗಮನಿಸಿದಾಗ 'ಶಿಕ್ಷಣ', 'ಶಿಕ್ಷಕ'. 'ಪದವೀಧರ' 'ವಿದ್ಯಾವಂತ' ಮುಂತಾದ ಶಬ್ದಗಳಿಗೆ ಹೊಸ ಅರ್ಥ ಹುಡುಕಬೇಕಾಗುತ್ತದೆ. ಪ್ರಾಥಮಿಕ, ಮಾಧ್ಯಮಿಕ ಶಾಲೆಗಳಲ್ಲಿ ಮೌಲ್ಯಶಿಕ್ಷಣಕ್ಕಾಗಿ ಒಂದು ಅವಧಿಯನ್ನು ಮೀಸಲಾಗಿಡುವ ರೂಢಿಯಿದೆ. ಆದರೆ ಆ ತರಗತಿಗಳ ಮೌಲ್ಯಮಾಪನ ಮಾಡುವವರು ಯಾರು? ಪ್ರೌಢಶಾಲೆ, ಕಾಲೇಜುಗಳಲ್ಲಿ ಮೌಲ್ಯಶಿಕ್ಷಣದ ಅಗತ್ಯವಿಲ್ಲವೇ? ಮೌಲ್ಯಶಿಕ್ಷಣಕ್ಕೆ ಒಂದು ಅವಧಿ ಸಾಕೆ? ಹೀಗೆ ಹಲವಾರು ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಇವುಗಳಿಗೆ ಶಿಕ್ಷಣತಜ್ಞರೂ, ಸಮಾಜದ ಗುರುಹಿರಿಯರೂ ಸೇರಿ ಸೂಕ್ತ ಪರಿಹಾರಗಳನ್ನು ಕಂಡುಕೊಳ್ಳಬೇಕು ಮತ್ತು ಮೌಲ್ಯಶಿಕ್ಷಣವನ್ನು ಪಠ್ಯಕ್ರಮದ (ಸಿಲಬಸ್‌ನ) ಒಂದು ಅವಿಭಾಜ್ಯ ಅಂಗವಾಗಿ ಅಳವಡಿಸಬೇಕು. ಶಿಕ್ಷಣ ಇಲಾಖೆಯವರು, ಇದಕ್ಕೂ ಇತರ ಪಠ್ಯ ವಿಷಯಗಳಷ್ಟೇ ಪ್ರಾಧಾನ್ಯ ನೀಡದಿದ್ದರೆ ಶಿಕ್ಷಕರೂ ಅದನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ, ವಿದ್ಯಾರ್ಥಿಗಳೂ ಅದನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.

'ಎಲ್ಲರಿಗೂ ಶಿಕ್ಷಣ ದೊರೆಯಬೇಕು', 'ಎಲ್ಲರೂ ಅಕ್ಷರಸ್ಥರಾಗಬೇಕು' ಎಂಬ ಹುಯಿಲು ದೇಶದಲ್ಲೆಲ್ಲ ಇಂದು ಕೇಳಿ ಬರುತ್ತಿದೆ. ಆದರೆ ಯಾವ ಬಗೆಯ ಶಿಕ್ಷಣ ನೀಡಬೇಕು ಎಂಬುದನ್ನು ಮೊದಲು ಸ್ಪಷ್ಟಪಡಿಸಿಕೊಳ್ಳಬೇಕು. ವ್ಯಕ್ತಿಯಲ್ಲಿ ಪ್ರಚಂಡ ಆತ್ಮವಿಶ್ವಾಸವನ್ನು ವಿಕಸನಗೊಳಿಸಬಲ್ಲಂಥ ಮತ್ತು ಅವನನ್ನು ತನ್ನ ಕಾಲಮೇಲೆ ತಾನು ನಿಲ್ಲುವಂತೆ ಮಾಡಬಲ್ಲಂತಹ ಶಿಕ್ಷಣ ಬೇಕು ಎನ್ನುತ್ತಾರೆ, ಸ್ವಾಮಿ ವಿವೇಕಾನಂದರು. ಅವರು ಹೀಗೆ ಹೇಳುತ್ತಾರೆ: "ಕೇವಲ ಪುಸ್ತಕವಿದ್ಯೆ ನಮಗಿಂದು ಸಾಲದು. ನಮಗೆ ಬೇಕಾಗಿರುವುದು ಚಾರಿತ್ರ್ಯವನ್ನು ರೂಪಿಸುವಂತಹ, ಮನಶ್ಶಕ್ತಿಯನ್ನು ಹೆಚ್ಚಿಸುವಂತಹ ಹಾಗೂ ಬುದ್ಧಿಶಕ್ತಿಯನ್ನು ವಿಸ್ತರಿಸುವಂತಹ ಶಿಕ್ಷಣ; ವ್ಯಕ್ತಿ ತನ್ನ ಕಾಲ ಮೇಲೆ ತಾನು ನಿಲ್ಲುವಂತೆ ಮಾಡಬಲ್ಲ ಶಿಕ್ಷಣ ಬೇಕು ನಮಗೆ."

ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಜಾಗೃತಗೊಳಿಸಿ ಪೋಷಿಸಬೇಕಾದುದು ಶಿಕ್ಷಕರ ಆದ್ಯಕರ್ತವ್ಯ. ಏಕೆಂದರೆ ಎಲ್ಲ ಬಗೆಯ ವ್ಯಕ್ತಿತ್ವ ನಿರ್ಮಾಣಕ್ಕೂ ಆತ್ಮವಿಶ್ವಾಸವೇ ಭದ್ರ ಬುನಾದಿ. ಆತ್ಮವಿಶ್ವಾಸದ ತಳಹದಿ ಇಲ್ಲದಿದ್ದರೆ ವ್ಯಕ್ತಿತ್ವನಿರ್ಮಾಣವೂ ಸಾಧ್ಯವಿಲ್ಲ, ಕಲಿತ ವಿದ್ಯೆಯೂ ಸರಿಯಾಗಿ ಫಲಿಸುವುದಿಲ್ಲ. ಅಲ್ಲದೆ ವಿದ್ಯಾರ್ಥಿಗಳನ್ನು ಕಾಡುವ ಎಲ್ಲ ಮಾನಸಿಕ ಕ್ಲೇಶಗಳಿಗೂ ಆತ್ಮವಿಶ್ವಾಸವೇ ಸಿದ್ಧೌಷಧಿಯಿದ್ದಂತೆ!

ಹಾಗಾದರೆ, ಆತ್ಮವಿಶ್ವಾಸ ಎಂದರೇನು? ತನ್ನಲ್ಲಿ ತನಗಿರುವ ನಂಬಿಕೆ. ತನ್ನ ಶಕ್ತಿಸಾಮರ್ಥ್ಯಗಳಲ್ಲಿ ತನಗಿರುವ ನಂಬಿಕೆಯೇ ಆತ್ಮವಿಶ್ವಾಸ! ಸ್ವಾಮಿ ವಿವೇಕಾನಂದರ ಸಿಂಹವಾಣಿಯು ಎಂತಹ ಅಂಜುಕುಳಿಯಲ್ಲೂ ಆತ್ಮವಿಶ್ವಾಸವನ್ನು ಬಡಿದೆಬ್ಬಿಸಬಲ್ಲದು. ಅಂತಹ ಒಂದು ಉದಾಹರಣೆಯಾಗಿ ಆ ವೇದಾಂತ ಕೇಸರಿಯ ಈ ಗರ್ಜನೆಯನ್ನು ಕೇಳಿ:

"ನಿಮಗೆ ಪುರಾಣದ ಮುನ್ನೂರಮೂವತ್ತು ಕೋಟಿ ದೇವತೆಗಳಲ್ಲಿ ನಂಬಿಕೆಯಿದ್ದರೂ, ನಿಮ್ಮಲ್ಲಿ ನಿಮಗೆ ನಂಬಿಕೆಯಿಲ್ಲದಿದ್ದರೆ ನಿಮಗೆ ಮುಕ್ತಿಯಿಲ್ಲ! ನಿಮ್ಮಲ್ಲಿ ಶ್ರದ್ಧೆಯಿಟ್ಟು ಆ ಶ್ರದ್ಧೆಯ ಬಲದಿಂದ ಎದ್ದು ನಿಲ್ಲಿರಿ! ಬಲಾಢ್ಯರಾಗಿರಿ! ನಮಗೀಗ ಬೇಕಾದುದು ಇದು!"